# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5015/2024 ಫ್ರಾಸಾ-04
ಚಾಸಾ-04

ದಿನಾಂಕಃ 16-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಾಜೇಶ್ |
| **ತಂದೆಯ / ಗಂಡನ ಹೆಸರು** | ಹೆಚ್. ಆಂಜನಪ್ಪ |
| **ವಯಸ್ಸು** | 45 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ದೊಮ್ಮತಮರಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಚಾಸಾ-1 ಮತ್ತು 2 ರವರು ನನಗೆ ಪರಿಚಯ ಇರುತ್ತಾರೆ. ನನಗೆ ಆರೋಪಿ ಪರಿಚಯ ಇರುತ್ತದೆ, ಅವನು ನಮ್ಮ ಊರಿನವನೇ ಇರುತ್ತಾನೆ. ಆರೋಪಿ ಗಿರೀಶ್ ಬಾಬು ರವರ ಮೇಲೆ ಮೊದಲು ಒಂದು ಕೊಲೆ ಪ್ರಕರಣ ದಾಖಲಾಗಿತ್ತು. ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 8.30 ಗಂಟೆಗೆ ಸಮಯದಲ್ಲಿ ದೊಮ್ಮತಮರಿ ಗ್ರಾಮದ ಆಶ್ವಿನಿ ಚಿಕನ್ ಸೆಂಟರ್ ಬಳಿ ನಾನು ಮತ್ತು ಚಾಸಾ-3 ಮತ್ತು 5 ರವರು ಇದ್ದಾಗ ರಮೇಶ್ ಹೊಲದ ಕಡೆ ಹೋಗುತ್ತಿದ್ದನು , ಆಗ ಆರೋಪಿ ಗಿರೀಶ್ ಕಬ್ಬಿಣದ ರಾಡು ತೆಗೆದುಕೊಂಡು ತಲೆಗೆ ಹೊಡೆದ ಇದರಿಂದ ರಮೇಶನ ತಲೆಗೆ ಗಾಯವಾಗಿರುತ್ತದೆ ಇದರಿಂದ ಅವನು ನೆಲದ ಮೇಲೆ ಕುಸಿದು ಬಿದ್ದನು, ಆರೋಪಿ ಹೊರಟು ಹೋದನು ನಾವುಗಳು ರಮೇಶನಿಗೆ ನೀರು ಕುಡಿಸಿ ಪಾವಗಡ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ.

ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಗಲಾಟೆಯಾದ 3 ದಿನಕ್ಕೆ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆ ಕಾಲಕ್ಕೆ ನನ್ನ ಜೊತೆ ಬಾಬು, ಅನಿಲ್ ರವರು ಇದ್ದರು. ಸದರಿ ಪಂಚನಾಮೆಯನ್ನು ಮದ್ಯಾಹ್ನ 2-30 ರಿಂದ 3-00 ಗಂಟೆಯವರೆಗೆ ಮಾಡಿರುತ್ತಾರೆ. ಸ್ಥಳದಿಂದ ಪೊಲೀಸರು ಕಬ್ಬಿಣದ ಪೈಪನ್ನು ತೆಗೆದುಕೊಂಡಿರುತ್ತಾರೆ. ಸದರಿ ಪೈಪ್ ನಿಂದಲೇ ಆರೋಪಿ ರಮೇಶನಿಗೆ ಹೊಡೆದಿರುತ್ತಾನೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಪೈಪನ್ನು ನೋಡಿ ಗುರುತಿಸಿರುತ್ತಾರೆ.

ನ್ಯಾಯಾಲಯದಲ್ಲಿರುವ ಅಮಾನತ್ತು ಪಂಚನಾಮೆಯ ದಿನಾಂಕ 13.07.2023 ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಘಟನೆಯಾದ 2 ತಿಂಗಳಿಗೆ ನಿಪಿ-5 ಅಮಾನತ್ತು ಪಂಚನಾಮೆಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತಾರೆ. ಆ ದಿನ ಪೊಲೀಸ್ ಠಾಣೆಯಲ್ಲಿ ಆರೋಪಿ ಇರಲಿಲ್ಲ, ಆತನು ಏನನ್ನೂ ಹಾಜರುಪಡಿಸಿರುವುದಿಲ್ಲ.

ನಿಪಿ-3 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಘಟನೆಯಾದ 3 ತಿಂಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೋಲೀಸರು ಗಾಯಾಳು ರಮೇಶ್ ಹಾಜರುಪಡಿಸಿದ ಸಿಮೆಂಟ್ ಕಲರ್ ಪ್ಯಾಂಟ್ , ವೈಟ್ ಶರ್ಟ್ , ಶರ್ಟ್ ಮೇಲೆ ಮಧು ಟೈಲರ್ ಎಂದು ಹೆಸರು ಇತ್ತು. ನ್ಯಾಯಾಲಯದ ಮುಂದೆ ಇರುವ ಮು.ಮಾ-2 ಮತ್ತು 3 ನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ-2 ಮತ್ತು 3 ರಮೇಶನ ಬಟ್ಟೆಗಳು ಇರುತ್ತವೆ ಅವುಗಳನ್ನು ಗುರುತಿಸುತ್ತೇನೆ. ಆರೋಪಿ ಗಿರೀಶನ ಬಟ್ಟೆ ನೋಡಿದರೆ ಗುರುತಿಸಲು ಆಗುವುದಿಲ್ಲ. ಆರೋಪಿಯ ಗಿರೀಶನ ಬಟ್ಟೆಗಳನ್ನು ನನ್ನ ಸಮಕ್ಷಮ ಪೊಲೀಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

**ಚಾಸಾ-04**

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ.02.07.2023 ರಂದು ನಿಪಿ-2 ಪಂಚನಾಮೆ ಕಾಲಕ್ಕೆ ಚಾಸಾ-1 ಗೋವಿಂದಪ್ಪ ಹಾಜರಿದ್ದು ಘಟನಾ ಸ್ಥಳ ತೋರಿಸಿರುತ್ತಾನೆ ಎನ್ನುವುದು ನಿಜ.

ದಿ. 13.07.2023 ರಂದು ಪೊಲೀಸ್ ಠಾಣೆಯಲ್ಲಿ ಆರೋಪಿ ಪೊಲೀಸರ ವಶದಲ್ಲಿದ್ದು ಆತನು ತನ್ನ ಜೊತೆಯಲ್ಲಿ ತಂದಿದ್ದ ಬ್ಯಾಗ್‌ನಿಂದ ಒಂದು ಶರ್ಟ್ ಮತ್ತು ಒಂದು ಪ್ಯಾಂಟ್ ನ್ನು ಹೊರಗೆ ತೆಗೆದು ಹಾಜರುಪಡಿಸಿದ್ದು ಸದರಿ ಶರ್ಟ್ ಬಿಳಿ ಬಣ್ಣದ ಶರ್ಟ್ ಆಗಿದ್ದು ಒಂದು ಸೀಮೆಂಟ್ ಕಲರ್ ನೈಟ್ ಪ್ಯಾಂಟ್ ನ್ನು ಹಾಜರುಪಡಿಸಿದ ಎಂದರೆ ಸರಿಯಲ್ಲ. ಮು.ಮಾ-4 ಮತ್ತು 5 ಬಟ್ಟೆಗಳನ್ನು ತೋರಿಸಿದ್ದು ಸಾಕ್ಷಿ ಸದರಿ ಬಟ್ಟೆಗಳು ರಮೇಶನಿಗೆ ಸೇರಿದ್ದು ಇರುತ್ತದೆ ಎಂದು ಹೇಳಿರುತ್ತಾರೆ. ನಿಪಿ-3 ರಂತೆ ಪಂಚನಾಮೆ ಮಾಡಿ ನನ್ನ ಸಮಕ್ಷಮ ಆರೋಪಿಯ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ. 04.09.2023 ರಂದು ರಮೇಶ ಒಂದು ಶರ್ಟ್ ಮತ್ತು ಬನಿಯನ್ ಹಾಜರುಪಡಿಸಿರುತ್ತಾನೆ ಎಂದರೆ ನಿಜ.

**ಪಾಟೀಸವಾಲುಃ- ಶ್ರೀ. ಪಿ.ಸಿ.ಕೆ.ಆರ್. ವಕೀಲರು ಗೈರು ಹಾಜರಿದ್ದು ಶ್ರೀ ಡಿ.ಸಿ.ಎಸ್. ವಕೀಲರು ಸಮಯ ಕೋರಿದ್ದು ಯಾವುದೇ ಸಕಾರಣ ಇರದೇ ಇದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**